**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ.1100/2015**

| | | |
|---|---|---|
| ಹೆಸರು | ಎ.ಟಿ. ಸುರೇಶ್ | ಪ್ರಾ.ಸಾ.6 |
| ತಂದೆ ಹೆಸರು | ತಿಮ್ಮೇಗೌಡ | ಚಾ.ಸಾ.18 |
| ವಯಸ್ಸು | 50 ವರ್ಷ | |
| ಕೆಲಸ | ಹಿರಿಯ ಮೋಟಾರ್ ವಾಹನ ನಿರೀಕ್ಷಕರು | ಸಾ.ಪ್ರ.ವ.ಬೋ |
| ಹಾಲಿ ವಾಸ | ಕಸ್ತೂರಿ ನಗರ, ಬೆಂಗಳೂರು | ದಿ:28.02.2023 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ : –**

ನಾನು ದಿ:05.07.2012 ರಿಂದ ದಿ:04.08.2021 ಆರ್‌ಟಿಓ ಕೆಆರ್.ಪುರಂನಲ್ಲಿ ಹಿರಿಯ ಮೋಟಾರ್ ವಾಹನ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿ: 04.04.2015 ರಂದು ನಂದಗುಡಿ ವೃತ್ತ ನಿರೀಕ್ಷಕರ ಕೋರಿಕೆ ಮೇರೆಗೆ ಮಧ್ಯಾಹ್ನ 3.40 ಗಂಟೆಗೆ ಠಾಣಾ ಆವರಣದಲ್ಲಿ ನಿಂತಿದ್ದ ಕೆಎ-01-ಎಂಬಿ-6910 ಕಾರು, ಸಿಟಿಎ-1910 ಕಾರು, ಕೆಎ-07-ವಿ-8754 ಮೋಟಾರ್ ಸೈಕಲ್, ಕೆಎ-01-ಎಬಿ-8154 ಆಟೋರಿಕ್ಷಾವನ್ನು ಪರಿಶೀಲಿಸಿರುತ್ತೇನೆ.

ವಾಹನಗಳನ್ನು ತಪಾಸಣೆ ಮಾಡಲಾಗಿ ಅದರ ಜಖಂಗಳನ್ನು ವರದಿಯಲ್ಲಿ ನಮೂದಿಸಿರುತ್ತೇನೆ. ಸದರಿ ವಾಹನಗಳನ್ನು ಸ್ಥಳದಲ್ಲಿಯೇ ಪರೀಕ್ಷಿಸಲಾಗಿ ಅವುಗಳ ತಡೆಗಳು ಸುಸ್ಥಿತಿಯಲ್ಲಿದ್ದವು. ನನ್ನ ಅಭಿಪ್ರಾಯದಲ್ಲಿ ಈ ಅಪಘಾತವು ವಾಹನದ ಯಾವುದೇ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ, ಆ ಕುರಿತು ನಾನು ವರದಿಯನ್ನು ನೀಡಿರುತ್ತೇನೆ. ಸದರಿ ವಾಹನ ತಪಾಸಣಾ ವರದಿಯನ್ನು ನಿ.ಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.8[ಎ] ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ : –**

ನಾನು ವಾಹನ ತಪಾಸಣೆ ಮಾಡಲು ಠಾಣೆಯವರು ನೀಡಿದ್ದ ಲಿಖಿತ ಮನವಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಾಹನಗಳು ಚಲಾಯಿಸುವ ಪರಿಸ್ಥಿತಿಯಲ್ಲಿ ಇರಲಿಲ್ಲ. ವಾಹನಗಳನ್ನುಸ್ಥಳದಲ್ಲಿಯೇ ಪರೀಕ್ಷಿಸಿದರೂಸಹ ಅವುಗಳ ತಡೆಗಳ ಬಗ್ಗೆ ಗೊತ್ತಾಗುತ್ತದೆ. ವಾಹನ ತಡೆಗಳ ವ್ಯವಸ್ಥೆಯ ಸ್ಥಿತಿ ಚಲಾಯಿಸಿ ನೋಡಿದಾಗ ಮಾತ್ರ ತಿಳಿಯುತ್ತದೆ ಎಂದರೆ ಸರಿಯಲ್ಲ. ಚಾ.ಸಾ.1ರವರಿಗೆ ಸಹಾಯ ಮಾಡಲು ವಾಹನಗಳನ್ನು ಖುದ್ದಾಗಿ ಪರೀಕ್ಷಿಸದೆ ಇದ್ದರೂ ನಿ.ಪಿ.8ನ್ನು ಕಛೇರಿಯಲ್ಲಿಯೇ ತಯಾರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಹೊಸಕೋಟೆ.